ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2004ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

4. ವಿತ್ತೀಯ ಕಾರ್ಯಕಲಾಪಗಳು

ಆಯವ್ಯಯದ ಮೇಲೆ ಮುಂದುವರೆದ ಚರ್ಚೆ

†ಶ್ರೀ ಜೆ.ಎಚ್. ಗೋಪಾಲ ಭಂಡಾರಿ (ಕಾರ್ಕಳ): ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಅನ್ನು ಹೊಸ ಕೊಡುಗೆಯಾಗಿ ಇವತ್ತು ಕರ್ನಾಟಕದ ಸ್ತ್ರೀ ಶಕ್ತಿ ಸಮುದಾಯಕ್ಕೆ ಕೊಟ್ಟಿದ್ದಾರೆ, ನಮ್ಮಲ್ಲಿ ಇದೊಂದು ಅಗತ್ಯವಾದ ಒಂದು ಕಾರ್ಯಕ್ರಮ. ಇದನ್ನು ನಾವೆಲ್ಲರು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇವೆ. ಏಕೆಂದರೆ ಇಲ್ಲಿ ಪ್ರಸ್ತಾಪ ಮಾಡಿದಂತೆ, 15 ಲಕ್ಷ ಕುಟುಂಬಗಳು ಇದರ ವ್ಯಾಪ್ತಿಯಲ್ಲಿ 150 ಕೋಟಿ ರೂಪಾಯಿಗಳ ಉಳಿತಾಯ ಈಗ ಆಗಿದೆ. ಬರಿ ಉಳಿತಾಯ ಮಾತ್ರವಾಗುತ್ತಿಲ್ಲ. ಸ್ವಉದ್ಯೋಗಕ್ಕೆ ಮತ್ತು ಬೇರೆ ಬೇರೆ ರೀತಿಯಲ್ಲಿ ಅಭಿವೃದ್ಧಿಶೀಲರಾಗಬೇಕಾದ ಅನೇಕ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಬ್ಯಾಂಕ್‌ಗಳಿಂದ ಸಾಲದ ಅವಶ್ಯಕತೆಯೂ ಕೂಡ ಇದೆ. ಈಗಾಗಲೇ ನಾವು ನೋಡುತ್ತಿರುವಂತೆ ಸ್ತ್ರೀಶಕ್ತಿ ಗುಂಪುಗಳ ಅವರ ಖಾತೆಗಳನ್ನು ತೆರೆಯುವುದಕ್ಕೆ ಕೆಲವೊಮ್ಮೆ ಹಿಂದೆ ಮುಂದೆ ನೋಡುವಂತಹ ವ್ಯವಸ್ಥೆಯನ್ನು ನಾವು ಇಲ್ಲಿ ಗಮನಿಸಿದ್ದೇವೆ. ಏಕೆಂದರೆ ಬಹಳ ಸಣ್ಣ ಮೊತ್ತದ ಖಾತೆಯಾಗಿದ್ದರಿಂದ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ನಿರ್ವಹಿಸುವುದಕ್ಕೆ ಹೆಚ್ಚು ಕೆಲಸವಾಗುತ್ತದೆ ಎನ್ನುವ ಕಾರಣದಿಂದ ಅದನ್ನು ನಿರಾಕರಣೆ ಮಾಡುವಂತಹ ವ್ಯವಸ್ಥೆಯನ್ನು ಅಲ್ಲಿ ನಾವು ಗಮನಿಸಿದ್ದೇವೆ. ಆದುದರಿಂದ ಇಂತಹ ಸಂದರ್ಭದಲ್ಲಿ ಅವರದೆ ಆದ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಮಾಡಿ 5000 ರೂಪಾಯಿ ಆ ಒಂದು ಸ್ವಸಹಾಯ ತಂಡಕ್ಕೆ ಹೇರು ಬಂದಮಾಳುಮಾಗಿ ಕೊಡುವಂತಹ ಕಾರ್ಯಕ್ರಮ ಅತ್ಯಂತ ಸ್ವಾಗತಾರ್ಹವಾದ ಕಾರ್ಯಕ್ರಮವೆಂದು ಹೇಳುತ್ತೇನೆ. ಇನ್ನೊಂದು ಮಹಿಳಾ ಸಮುದಾಯಕ್ಕೆ ಇಂದಿರಾ ಜ್ಯೋತಿ ಎನ್ನುವ ಕಾರ್ಯಕ್ರಮ ಕೊಡುಗೆಯಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯವರಿಗೂ ಕೂಡ ಬಹಳ ವ್ಯವಸ್ಥಿತವಾಗಿ ಒಂದು ಸಿಲಿಂಡರ್ ಮತ್ತು ಬರ್ನರ್ ಒಲೆಯನ್ನು ಒದಗಿಸುವ ಕಾರ್ಯಕ್ರಮ ಬಡಜನ ಬುತ್ತಾಮವಾದುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮಲ್ಲಿ ಮನೆ ಕೊಡುವ ಕಾರ್ಯಕ್ರಮ ಅಂದು ದಿ: ಶ್ರೀಮತಿ ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮದಲ್ಲಿ ಆರಂಭವಾದುದು, ಹಂತ ಹಂತವಾಗಿ ಆಗಾಗ ಹೆಚ್ಚು ಕಡಿಮೆಯಾಗುವ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಸನ್ಮಾನ್ಯ ಎಸ್.ಎಸ್. ಕೃಷ್ಣಂವರ ನೇತೃತ್ವದಲ್ಲಿ ಬಂದಂತಹ ಸರ್ಕಾರ ರಾಜೀವ್‌ಗಾಂಧಿ ವಸತಿ ನಿಗಮ ಎನ್ನುವುದನ್ನು ಮಾಡಿ ಬಹಳ ದೊಡ್ಡ ಗಾತ್ರದಲ್ಲಿ ನಮ್ಮ ರಾಜ್ಯದಲ್ಲಿ ಮನೆಗಳನ್ನು, ದುರ್ಬಲವರ್ಗದವರಿಗೆ, ಅವಕಾಶವಿಂದು ವಂಚಿತರಾದವರಿಗೆ ಕೊಟ್ಟಂತಹ ಒಂದು ಇತಿಹಾಸ ಇದೊಂದು ಬಾಕಿಯಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ಹೆಚ್ಚು ಒತ್ತು ಕೊಡುವ ಒಂದು ವ್ಯವಸ್ಥೆಯನ್ನು ಸರ್ಕಾರ ಮುಂದಿನ ದಿವಸಗಳಲ್ಲಿ ಮಾಡಿಕೊಂಡು ಬಂದಾಗ ದುರ್ಬಲವರ್ಗಕ್ಕೆ ಇದರಿಂದ ಹೆಚ್ಚು ಸಹಾಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಪ್ರೋತ್ಸಾಹ ಇವತ್ತು ಸಿಗುತ್ತದೆ. ಅದನ್ನೂ ಕೂಡ ನಮ್ಮ ಕರ್ನಾಟಕ ರಾಜ್ಯ ಬಯಲಾಲದ ಛಾಯೆಯಲ್ಲಿ ನಾವೆಲ್ಲಾ ಇದ್ದೇವೆ ಮೂರು ವರ್ಷಗಳ ಕಾಲ ಆ

(†ಈ ಚಿಹ್ನೆ ಮಾನ್ಯ ಸದಸ್ಯ ಹಿಜ್ಞೆ ಅಥವಾ ಭಾಷಣವನ್ನು ದೃಢೀಕರಿಸಿಲ್ಲವೆಂಬ ಸೂಚಿಸುತ್ತದೆ)

ಬರಗಾಲವನ್ನು ಸಮರ್ಥವಾಗಿ ಎದುರಿಸುವುದರ ಜೊತೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಾಮಾನ್ಯ ಮಟ್ಟಿಗೆ ತೃಪ್ತಿಕರವಾಗಿ ನಿರ್ವಹಿಸಿದಂತಹ ಒಂದು ತೃಪ್ತಿ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮದು ಕರಾವಳಿ ಜಿಲ್ಲೆಯಲ್ಲಿ ಹೆಚ್ಚು ಮಳೆ ಬರುವ ಪ್ರದೇಶ, ಅದು ದಕ್ಷಿಣ ಕನ್ನಡ ಇರಬಹುದು ಅಥವಾ ಉತ್ತರ ಕನ್ನಡ ಇರಬಹುದು ಅಥವಾ ಕೊಡಗು ಜಿಲ್ಲೆ ಇರಬಹುದು. ವಿಶೇಷ ಮಳೆ ಬಂದರೂ ಕೂಡ ಜನವರಿ ತಿಂಗಳಿಗೆ ಕುಡಿಯುವುದಕ್ಕೆ ನೀರಿಲ್ಲದಿರುವ ಭೌಗೋಳಿಕ ಪರಿಸ್ಥಿತಿ ಅಲ್ಲಿದೆ. ಅಲ್ಲಿ ಈ ಕುಡಿಯುವ ನೀರಿನ ಈ ಕೊಳವೆಬಾವಿಗಿಂತ ಹೆಚ್ಚು ತೆರದ ಬಾವಿಗಳನ್ನು ನಿರ್ಮಿಸುವಂಥ ಒಂದು ವ್ಯವಸ್ಥೆಯನ್ನು ಮಾಡುವುದು ಬಹಳ ಸೂಕ್ತ. ಈ ತೆರೆದ ಬಾವಿಗಳಿಗು ಕೂಡ ಅನುದಾನವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಒಂದು ಸಣ್ಣ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. 880 ಕೋಟಿ ರೂ.ಗಳ ಪ್ಯಾಕೇಜ್ ಅನ್ನು ಬರಗಾಲ ಪೀಡಿತ ರೈತರಿಗೆ ಇದರಿಂದ ಬಹಳ ದೊಡ್ಡ ಸಹಾಯ ಸಿಕ್ಕಿದೆ ಮುಂದಿನ ದಿವಸಗಳಲ್ಲಿಯೂ ಕೂಡ ಅದಕ್ಕೆ ಪೂರಕವಾಗಿ ಕೃಷಿ ಕ್ಷೇತ್ರವನ್ನು ಬೆಳೆಸುವಂತಹ ಅನೇಕ ಪ್ರಸ್ತಾವನೆಗಳನ್ನು ಕೂಡ ಈ ಆಯವ್ಯಯದಲ್ಲಿರುವುದು ಬಹಳ ಅಭಿನಂದನೀಯ ವಿಚಾರ. ವಿಶೇಷವಾಗಿ ಪಶ್ಚಿಮವಾಹಿನಿ ನಿಗಮ, ನಾವು ಬಹಳಷ್ಟು ದಿವಸಗಳಿಂದ ಮೂರು ಜಿಲ್ಲೆಯ ಜನ ಇದನ್ನು ನಿರೀಕ್ಷೆ ಮಾಡಿದ್ದೇವು. ಪಶ್ಚಿಮವಾಹಿನಿ ಎನ್ನುವ ಒಂದು ವ್ಯವಸ್ಥೆಯನ್ನು ನಮ್ಮ ಮೂರು ಜಿಲ್ಲೆಗಳಲ್ಲಿ ಸಾಕಷ್ಟು ನದಿಗಳು ಹರಿದು ಸಮುದ್ರವನ್ನು ಸೇರುತ್ತದೆ. ಅದರಲ್ಲಿ ಶೇಕಡ 90ರಷ್ಟು ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುವಂತಹ ಒಂದು ಪರಿಸ್ಥಿತಿ ನಮ್ಮ ಜಿಲ್ಲೆಗಳಲ್ಲಿದೆ. ಆದರೆ ಆ ನದಿ ನೀರನ್ನು ವ್ಯವಸ್ಥಿತವಾಗಿ ಸದ್ಬಳಕೆಯಾಗಬೇಕಾದರೆ ಅಲ್ಲಲ್ಲಿ ಕಿರುಅಣೆಕಟ್ಟುಗಳನ್ನು, ನಮ್ಮ ಮೂರು ಜಿಲ್ಲೆಗಳಲ್ಲಿ ಭಾರಿ ಕಾಮಗಾರಿಗಳು ಆಗಿದ್ದಲ್ಲಿ, ಅದು ಆಗುವುದಕ್ಕೆ ಕೂಡ ಅವಕಾಶವಿಲ್ಲ, ಅದು ಭೌಗೋಳಿಕವಾಗಿ ಎತ್ತರದಲ್ಲಿರುವ ಪ್ರದೇಶ. ಅಲ್ಲಿ ಈ ಸಣ್ಣ ನೀರಾವರಿ ವ್ಯವಸ್ಥೆಗಳನ್ನು ಲಿಫ್ಟ್ ಇರಿಗೇಷನ್‌ಗಳನ್ನು ಈ ರೀತಿಯ ವ್ಯವಸ್ಥೆ ಮಾಡುವುದರಿಂದ ಅಂತರ್ಜಲದ ಮಟ್ಟವೂ ಕೂಡ ಮತ್ತಷ್ಟು ಎತ್ತರಕ್ಕೆ ಏರುವುದಕ್ಕೆ ಕಾರಣವಾಗುತ್ತದೆ ಜೊತೆಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಕೃಷಿಗೂ ಕೂಡ ನೀರನ್ನು ವ್ಯವಸ್ಥಿತವಾಗಿ ಕೊಡುವುಕ್ಕಾಗುತ್ತದೆ ಎನ್ನುವುದು ನಮ್ಮ ನಿರೀಕ್ಷೆಯಾಗಿತ್ತು. ಅದನ್ನು ಸರ್ವೆ ಮಾಡಿ ಹಾಗೆ ಇದ್ದ ವ್ಯವಸ್ಥೆಯನ್ನು ಸರಿಪಡಿಸಲು ಅದಕ್ಕೊಂದು ನಿಗಮವನ್ನು ಮಾಡಿ ಅದರ ಮುಖೇನ ಕಾರ್ಯಕ್ರಮಗಳನ್ನು ಅನುಷ್ಟಾನ ಬಹಳ ದೊಡ್ಡ ನಿರ್ಧಾರವನ್ನು ತೆಗೆದುಕೊಂಡಿದ್ದು ಸ್ವಾಗತಾರ್ಹ ಎಂಬುದಾಗಿ ಹೇಳುತ್ತೇನೆ. ಇನ್ನು, ಬಹಳ ವಿಶೇಷವಾಗಿ ಕರಾವಳಿ ಮತ್ತು ಅನೇಕ ಜಿಲ್ಲೆಗಳಲ್ಲಿ ಪಂಪುಸೆಟ್ಟುಗಳ ಮುಖೇನ ಕೃಷಿಯನ್ನು ಅವಲಂಬಿಸಿಕೊಂಡಿರತಕ್ಕಂಥ ರೈತರಿಗೆ 31-3-2003ರವರೆಗಿನ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಾಕಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿ, 600 ಕೋಟಿ ರೂಪಾಯಿಗಳ ದೊಡ್ಡ ಮೊತ್ತವನ್ನು ಸರ್ಕಾರ ಭರಿಸತಕ್ಕಂಥಾದ್ದು ಐತಿಹಾಸಿಕವಾದಂಥ ನಿರ್ಧಾರವಾಗಿದೆ. ಇದರಿಂದ ರೈತರಿಗೆ ಒಂದು ರೀತಿಯಲ್ಲಿ ಸ್ವಲ್ಪ ಸಮಾಧಾನವಾಗಿದೆ ಮತ್ತು ಅವರ ಕೃಷಿ ಕ್ಷೇತ್ರದಲ್ಲಿ ಆರ್ಥಿಕ ಚೈತನ್ಯವನ್ನು ತುಂಬತಕ್ಕಂಥ ಕೆಲಸವಾಗಿದೆ ಎನ್ನುವುದನ್ನು ಹೇಳುತ್ತೇನೆ. ಮಲೆನಾಡಿ ಪ್ರದೇಶದಲ್ಲಿ ಕಾಫಿ ಬೆಳೆಗಾರರ ಪರಿಸ್ಥಿತಿ ಬಹಳ ಸಂಕಷ್ಟದಲ್ಲಿರುವಾಗ ಅಲ್ಲಿಯೂ ಕೂಡ ಸ್ವಲ್ಪ ಸಹಾಯಹಸ್ತವನ್ನು ಚಾಚಿ ತೆರಿಗೆ ವಿನಾಯಿತಿ ಮಾಡತಕ್ಕಂಥ ವ್ಯವಸ್ಥೆಯನ್ನು ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಆಯವ್ಯಯದಲ್ಲಿ ಅಳವಡಿಸಿದ್ದು ಬಹಳ ಅಭಿನಂದನೀಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು 'ಯಶಸ್ವಿನಿ' ಯೋಜನೆ ಬಹಳ ಒಳ್ಳೆಯ ಕಾಯಕ್ರಮವಾಗಿ ಮೂಡಿ ಬಂದಿದೆ. ಸಹಕಾರಿ ಕ್ಷೇತ್ರದಲ್ಲಿರತಕ್ಕಂಥ ಸಂಘಗಳಲ್ಲಿ ಸದಸ್ಯರಾಗಿರತಕ್ಕಂಥವರಿಗೆ ಜೀವನ್ಮರಣ ಹೋರಾಟದ ಖಾಯಿಲೆಗಳು ಬಂದಾಗ ಅವರು ಅದರಿಂದ ಚೇತರಿಸಿಕೊಳ್ಳಲು ಈ ಕಾರ್ಯಕ್ರಮ ಬಹಳ ದೊಡ್ಡ ಕೊಡುಗೆಯಾಗಿದೆ. ಈಗ ಅದಕ್ಕೆ ಪೂರಕವಾಗಿ 'ರೈತ ಸಂಜೀವಿನಿ' ಕಾರ್ಯಕ್ರಮವನ್ನು ತಂದಿದ್ದಾರೆ. ಇದೂ ಬಹಳ ಒಳ್ಳೆಯ ಕಾರ್ಯಕ್ರಮ. ಈ ರಾಜ್ಯದ ಎಲ್ಲಾ ರೈತರು ಅಭಿನಂದಿಸತಕ್ಕ ಕಾರ್ಯಕ್ರಮ ಈ 'ರೈತ ಸಂಜೀವಿನಿ' ಕಾರ್ಯಕ್ರಮ ಬಹಳ ಒಳ್ಳೆಯ ಕಾರ್ಯಕ್ರಮ ಎಂಬುದಾಗಿ ಹೇಳುತ್ತೇನೆ. ಪರಿಶಿಷ್ಟ ಜಾತಿಯವರು ಅಥವಾ ಹಿಂದುಳಿದವರಿಗೆ ಕೊಡುವ ಗಂಗಾ ಕಲ್ಯಾಣ ಯೋಜನೆ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಕೊಡುವ ಬೇರೆ ಬೇರೆ ಕಾರ್ಯಕ್ರಮಗಳಿಗೆ ವಿಶೇಷವಾದಂಥ ಪ್ರೋತ್ಸಾಹದ ಒಂದು ಪ್ರಾಶ್ತಾಪವೂ ಇದರಲ್ಲಿ ಇದೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ, ಅವಕಾಶ ವಂಚಿತರಾಗಿರುವಂಥ ಅನೇಕ ವರ್ಗಗಳಿವೆ. ಈ ಆಯವ್ಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಪಥಮವಾಗಿ ಕರ್ನಾಟಕ ರಾಜ್ಯದಲ್ಲಿ ಅವರನ್ನು ಗುರುತಿಸಿದ್ದಾರೆ. ಅಗಸರು, ಕುಂಬಾರರು, ಗಾಣಿಗರು, ಬಡಗಿ, ಸವಿತಾ ಸಮಾಜ ಇತ್ಯಾದಿ ಹಿಂದುಳಿದ ವರ್ಗದವರು, ಇವರು ಅಲ್ಪಸಂಖ್ಯಾತರಲ್ಲ, ಸ್ವಲ್ಪ ಸಂಖ್ಯಾರು ಎನ್ನುವ ಹಂತದಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದರೂ ಕೂಡ, ತಮ್ಮದೇ ಆದಂಥ ಕಸುಬನ್ನು ಮಾಡಿಕೊಂಡಿರತಕ್ಕಂಥ ಅವರಿಗೆ, ಅವರ ಕಸುಬನ್ನು ಇನ್ನಷ್ಟು ಆಧುನಿಕ ವ್ಯವಸ್ಥೆಯಲ್ಲಿ ಮಾಡುವುದರ ಜೊತೆಗೆ ಸಮಾಜದ ಮುಖ್ಯ ವಾಹಿನಿಯಲ್ಲಿ ಅವರು ಸೇರಿಕೊಳ್ಳಲು ಪೂರಕವಾದಂಥ ನಿಟ್ಟಿನಲ್ಲಿ, ಅವರಿಗೆ ಸ್ವಲ್ಪ ಚೈತನ್ಯವನ್ನು ಕೊಡತಕ್ಕಂಥ ವ್ಯವಸ್ಥೆಯ ಪ್ರಸ್ತಾವ 'ಶ್ರಮಶಕ್ತಿ' ಕಾರ್ಯಕ್ರಮದ ಮುಖೇನ ಬಂದಿದೆ. ಇದು ಬಹಳ ಉತ್ತಮವಾದಂಥ ಕಾರ್ಯಕ್ರಮ. ಇತ್ತೀಚಿನ ದಿನಗಳಲ್ಲಿ ಇಂಥ ವರ್ಗಗಳನ್ನು ಗುರುತಿಸಿದಂಥ ಪ್ರಥಮ ಮುಖ್ಯಮಂತ್ರಿಗಳು ಇವರು ಎಂಬುದಾಗಿ ಹೇಳಿ, ಅದಕ್ಕಾಗಿ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಇನ್ನು, ಕರಾವಳಿಯಲ್ಲಿ ರೈತರಷ್ಟೇ ಅತ್ಯಂತ ಪ್ರಮುಖವಾದಂಥ ಇನ್ನೊಂದು ವರ್ಗ ಎಂದರೆ ಮೀನುಗಾರರು. ಅಲ್ಲಿ ಮೀನುಗಾರರು ಮತ್ತು ಮೀನು ಮಾರಾಟ ಮಾಡತಕ್ಕಂಥ ಎರಡು ವರ್ಗಗಳಿವೆ. ಸಮುದ್ರದಲ್ಲಿ ಸಾಹಸದಿಂದ ಮೀನನ್ನು ಹಿಡಿಯಲು ಹೋಗುವಂಥಾದ್ದು ಒಂದು ವರ್ಗವಾದರೆ, ಆ ಮೀನನ್ನು ಮಹಿಳೆಯರು ಮತ್ತು ಇತರರು ಗ್ರಾಮೀಣ ಪ್ರದೇಶಗಳಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡತಕ್ಕಂಥ, ಅದನ್ನು ಸಂಸ್ಕರಣೆ ಮಾಡತಕ್ಕಂಥದ್ದು ಇನ್ನೊಂದು ವರ್ಗ. ಈ ವ್ಯವಸ್ಥೆ ಅಲ್ಲಿ ಬಹಳ ಪ್ರಾಮುಖ್ಯವಾದಂಥ ಜೀವನಾಧಾರ. ಇವತ್ತು ಮೀನುಗಾರಿಕೆ ಉದ್ಯಮದಲ್ಲಿ ಮಹಿಳೆಯರಿಗೆ ಐದು ಸಾವಿರ ರೂಪಾಯಿಗಳ ಅಂಚಿನ ಹಣವನ್ನು ಕೊಡಲು ಹತ್ತು ಕೋಟಿ ರೂಪಾಯಿಗಳನ್ನು ಈ ಆಯವ್ಯದಲ್ಲಿ ಮೀಸಲಿರಿಸಿದ್ದಾರೆ. ಇದು ಬಹಳ ಉತ್ತಮವಾಗಿರುವಂಥ ಒಂದು ಕಾರ್ಯಕ್ರಮ. ಈ ಸಮಾಜದಲ್ಲಿ ಆರ್ಥಿಕವಾಗಿ ಸಮಸ್ಯೆಯನ್ನು ಎದುರಿಸುತ್ತಿರುವಂಥ ಒಂದು ವರ್ಗಕ್ಕೆ ಆರ್ಥಿಕ ಚೈತನ್ಯವನ್ನು ಕೊಡುವಂಥ ವ್ಯವಸ್ಥೆ ಇದರಿಂದ ಆಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದೆರಡು ವರ್ಷಗಳಲ್ಲಿ, ಮೀನುಗಾರರಿಗೆ 34 ಕೋಟಿ ರೂಪಾಯಿಗಳ ಡೀಸಲ್ ಸಬ್ಸಿಡಿಯನ್ನು ನಮ್ಮ ಸರ್ಕಾರ ಕೊಟ್ಟಿರುವಂಥ ದಾಖಲೆ ಇದೆ. ಅದೇ ರೀತಿ, ಈ ವರ್ಷವೂ ಕೂಡ ಡೀಸೆಲ್ ಸಬ್ಸಿಡಿಯನ್ನು ಕೊಡಬೇಕಾದಂಥ ಒಂದು ಅವಶ್ಯಕತೆ ಇದೆ. ಮತ್ಸ್ಯಕ್ಷಾಮ ಮುಂತಾದ ಬೇರೆ ಬೇರೆ ರೀತಿಯ ಸಮಸ್ಯೆಗಳನ್ನು ಮೀನುಗಾರರು ಎದುರಿಸತಕ್ಕಂಥ

ಈ ಸಂದರ್ಭದಲ್ಲಿ ಅವರಿಗೆ ಡೀಸಲ್ ಸಬ್ಸಿಡಿಯನ್ನು ಮುಂದುವರಿಸತಕ್ಕಂಥ ವ್ಯವಸ್ಥೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕು ಎನ್ನುವ ವಿನಂತಿಯನ್ನು ಕೂಡ ನಾನು ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತಿದ್ದೇನೆ.

†**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)**: ಮಾನ್ಯ ಸದಸ್ಯರು ಮಾತನಾಡುತಿರುವಂಥಾದ್ದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಾ ಕೆಲವು ವಿಚಾರವನ್ನು ಹೇಳುತ್ತೇನೆ. ಈ ಕಾರ್ಯಕ್ರಮವನ್ನು ಹಿಂದಿನ ಸರ್ಕಾರ ಪ್ರಾರಂಭ ಮಾಡಿತು. ನಾನು ಅನೇಕ ಬಾರಿ ಈ ಸದನದಲ್ಲಿ ಹೇಳಿದ್ದೇನೆ. ಇದು ವರ್ಷವರ್ಷ ಕೊಡುವಂಥ ಕಾರ್ಯಕ್ರಮವಾಗಬೇಕು ಎಂದು. ಅವರು ಕೇಳುವಂಥಾದ್ದು, ನಂತರ ಸರ್ಕಾರ ಕೊಡುವಂಥ ಈ ಕಾರ್ಯಕ್ರಮವನ್ನು ನಿಲ್ಲಿಸಿ, ಒಂದು ಪರ್ಮನೆಂಟ್ ಪ್ರೋಗ್ರಾಂ ಆಗಿ ಇಟ್ಟುಕೊಳ್ಳಿ ಎಂದು ಹೇಳಿದ್ದೇನೆ. ಪ್ರತಿವರ್ಷ ಆಯವ್ಯಯ ಮಂಡನೆ ಮಾಡಿದ ಕೂಡಲೇ ಮೀನುಗಾರರು ಬಂದು ಡೀಸಲ್ ಸೇಲ್ಸ್ ಟ್ಯಾಕ್ಸ್ ಎಕ್ಸಂಪ್ಷನ್ ಕೊಡಿ ಎಂದು ನಮ್ಮನ್ನು ಕೇಳುತ್ತಾರೆ. ತಾವು ಹೇಳಿದಂತೆ ಅದು ಸಬ್ಸಿಡಿ ಅಲ್ಲ, ಅದು exemption of sales tax on diesel. ಅದು ಒಂದು ವರ್ಷಕ್ಕೆ 32–34 ಕೋಟಿ ರೂ. ಆಗುತ್ತದೆ. ಅದನ್ನು ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕು ಎಂದು ನಾನು ಕೇಳುತ್ತಿದ್ದೆ. ಆದರೆ, ಪ್ರತಿಬಾರಿಯೂ ಇದನ್ನು ಆಯವ್ಯದಲ್ಲಿ ಹೇಳುವುದಿಲ್ಲ, ನಂತರ ಅವರು ಬಂದು ಸರ್ಕಾರವನ್ನು ಈ ಬಗ್ಗೆ ಬೇಡಿದ ಹಾಗೆ ಮಾಡುವುದು, ಇವರು ಕೊಟ್ಟ ಹಾಗೆ ಮಾಡುವುದು, ಅದಕ್ಕೆ ಅಭಿನಂದನೆ ಸಲ್ಲಿಸುವುದು ಆಗುತ್ತಿದೆ. ಅದನ್ನು ನಿಲ್ಲಿಸಬೇಕಾಗುತ್ತದೆ. ಅದಕ್ಕೆ ಒಂದು ಶಾಶ್ವತವಾದ ಒಂದು ಕಾರ್ಯಕ್ರಮವನ್ನು ಮಾಡಬೇಕು. ಮಹಿಳಾ ಮೀನುಗಾರರಿಗೆ ಕೊಟ್ಟಿರುವ ಐದು ಸಾವಿರ ರೂಪಾಯಿಗಳ ಅಂಚಿನ ಹಣವನ್ನು ಹೊಸ ತಂತ್ರಜ್ಞಾನದ ಮಾರುಕಟ್ಟೆಗೆ ಎಂದು ಹೇಳುತ್ತಾರೆ. ಆದರೆ ಹೊಸ ತಂತ್ರಜ್ಞಾನದ ಮಾರುಕಟ್ಟೆ ಮಾಡಲು ಮಹಿಳೆಯರಿಗೆ ಆಗುವುದಿಲ್ಲ. ಅದರ ಬದಲು, ಅದನ್ನು ವ್ಯಾಪಾರಕ್ಕೆ ಎಂದು ಕೊಟ್ಟರೆ, ಆ ಐದು ಸಾವಿರ ರೂಪಾಯಿಗಳ ಉಪಯೋಗವನ್ನು ಮಾಡಲು ಸಾಧ್ಯವಾಗುತ್ತದೆ. ಮಾರುಕಟ್ಟೆಗೆ ಎಂದು ಕೊಟ್ಟರೆ ಅದನ್ನು ಉಪಯೋಗ ಮಾಡಲು ಆಗುವುದಿಲ್ಲ. ಅಲ್ಲಿ ಹೋದಾಗ ಅದರ ಇಂಟರ್‌ಪ್ರಿಟೇಷನ್ನೇ ಬೇರೆಯಾಗುತ್ತದೆ. ಆದ್ದರಿಂದ, ಅದನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮೀನುಗಾರರ ಸಮುದಾಯಕ್ಕೆ ಈ ರೀತಿಯ ಒಂದು ಹೊಸ ಸಹಾಯವನ್ನು ಕೊಡುವುದರ ಜೊತೆಗೆ, ಮುಂದಿನ ದಿನಗಳಲ್ಲಿ ಡೀಸೆಲ್ ಸಬ್ಸಿಡಿಯನ್ನು ಕೂಡ ಕೊಡುವುದು ಬಹಳ ಅಗತ್ಯವಾಗಿದೆ ಎನ್ನುವ ಮಾತನ್ನು ಮತ್ತೊಮ್ಮೆ ಹೇಳುತ್ತೇನೆ.

ಇನ್ನು, ನೇಕಾರರು ಬಹಳ ಸಮಸ್ಯೆಯನ್ನು ಎದುರಿಸತಕ್ಕಂಥ ಸಂದರ್ಭದಲ್ಲಿ ಅವರಿಗೆ 100 ಕೋಟಿ ರೂಪಾಯಿಗಳ ಪ್ಯಾಕೇಜನ್ನು ಘೋಷಿಸಿರುವಂಥಾದ್ದು ಬಹಳ ಉತ್ತಮವಾದಂಥ ಕಾರ್ಯಕ್ರಮ ಎಂದು ಹೇಳುತ್ತೇನೆ. ವಿಶೇಷವಾಗಿ ಸ್ತ್ರೀ ಸಮುದಾಯ 'ಸ್ತ್ರೀ ಶಕ್ತಿಯ' ಮುಖೇನ ಸಮಾಜದ, ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ರಚನಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಳ್ಳುವಲ್ಲಿ ಯಶಸ್ಸನ್ನು ಕಾಣುವಂಥ ದಿನಗಳಲ್ಲಿ ಯುವ ಸಮುದಾಯಕ್ಕೆ ಸರಿಯಾದಂಥ ಒಂದು ಮಾರ್ಗದರ್ಶನ ಬೇಕು ಮತ್ತು ಆ ಯುವ ಶಕ್ತಿಯ ಸದ್ಬಳಕೆ ನಮ್ಮಲ್ಲಿ ಆಗಬೇಕಾಗಿದೆ. ನಮ್ಮ ಯುವಶಕ್ತಿಯ ಸ್ಫೋಟನ ಸಮಾಜದ ಅಭಿವೃದ್ಧಿಗೆ ಪೂರಕವಾಗಿ ಅದಾಗ ಬಲಿಷ್ಠವಾದಂಥ ಭಾರತವನ್ನು ನಾವು ಕಾಣಬಹುದು ಎನ್ನುವುದು ನನ್ನ ನಿರೀಕ್ಷೆ. ಅದು ವ್ಯತಿರಿಕ್ತವಾದಾಗ ಸಮಾಜಕ್ಕೆ ಅದಕ್ಕಿಂತ

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಶೀಲಿಸಿಲ್ಲವೆಂದು ಸೂಚಿಸುತ್ತದೆ)

ದೊಡ್ಡ ಅಪಾಯ ಬೇರೊಂದು ಇರಲಿಕ್ಕಿಲ್ಲ. ಅಂಥ ಯುವಶಕ್ತಿಯ ಸದ್ಬಳಕೆ ಆಗಬೇಕಾದರೆ ಅವರಲ್ಲಿ ಸಾಂಸ್ಕೃತಿಕ ಪ್ರತಿಭೆ, ಕ್ರೀಡಾ ಪ್ರತಿಭೆ ಮತ್ತು ಸೇವಾ ಮನೋಭಾವನೆಯನ್ನು ತುಂಬತಕ್ಕಂಥ 'ರಾಜೀವ್ ಯುವ ಶಕ್ತಿ ಸಂಘಟನೆ' ಈಗಾಗಲೇ ನಮ್ಮ ಎಲ್ಲಾ ಪ್ರದೇಶಗಳಲ್ಲಿ ಸಂಘಟಿತವಾಗಿದೆ. ಈ ಶಕ್ತಿಯನ್ನು ಇನ್ನಷ್ಟು ಬಲಗೊಳಿಸಲು 'ರಾಜೀವ್ ಕ್ರೀಡಾ ಸಾಂಸ್ಕೃತಿಕ ಸಂಕೀರ್ಣ'ವನ್ನು ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೊಡುವಂಥಾದ್ದು ಅತ್ಯಂತ ಅಭಿನಂದನೀಯ. ಈ ಸಂದರ್ಭದಲ್ಲಿ ನಾನು ಒಂದು ಸಣ್ಣ ಪ್ರಸ್ತಾಪವನ್ನು ಮಾಡಲು ಇಚ್ಛಿಸುತ್ತೇನೆ. ಇವತ್ತು ನಮ್ಮಲ್ಲಿಕಕ್ಕಂಥ ಎಲ್ಲಾ ಸಂಘಟನೆಗಳು, ಅವು ಯುವಕ ಸಂಘಟನೆಗಳಿರಬಹುದು, ಮಹಿಳಾ ಮಂಡಳಿಗಳಿರಬಹುದು ಅಥವಾ ಬೇರೆ ಬೇರೆ ಸ್ವಯಂ ಸೇವಾ ಸಂಘಟನೆಗಳಿರಬಹುದು, ಅವುಗಳು ತಮ್ಮದೇ ಆದಂಥ ಸಂಘಟನಾ ಕೆಲಸಗಳನ್ನು ಮಾಡಲು ಅವುಗಳಿಗೆ ಒಂದು ನಿವೇಶನ ಅಥವಾ ಒಂದು ಕಛೇರಿ ಅಥವಾ ಒಂದು ಪ್ರದೇಶವನ್ನು ಪಡೆಯಬೇಕಾದಂಥ ಅವಶ್ಯಕತೆ ಇದೆ. ಅವುಗಳು ಸರ್ಕಾರದ ಸ್ಥಳವನ್ನು ಕೇಳಿದಾಗ, ಅದನ್ನು ಮಂಜೂರು ಮಾಡುವ ಅಧಿಕಾರವನ್ನು ಕನಿಷ್ಠ ತಹಶೀಲ್ದಾರ್ ಅಥವಾ ಜಿಲ್ಲಾಧಿಕಾರಿಗಳಿಗೆ ಅವಕಾಶವನ್ನು ಕೊಡುವಂಥಾದ್ದು ಬಹಳ ಸೂಕ್ತ. ಆ ಸ್ಥಳ ಮಂಜೂರಾತಿಗಾಗಿ ಅವರು ರಾಜ್ಯದ ಮಟ್ಟಕ್ಕೆ ಬರುವಂಥ ವ್ಯವಸ್ಥೆಯ ಬದಲು, ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಳ ಮಂಜೂರು ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಅದನ್ನು ಸರ್ಕಾರದವರು ಮಾಡುತ್ತಾರೆ ಎನ್ನುವ ನಂಬಿಕೆ ನನಗಿದೆ.

ಇನ್ನು ಗ್ರಾಮ ವಿದ್ಯುತ್ ಪ್ರತಿನಿಧಿ ಯೋಜನೆ. ಇದರಿಂದ ಯುವಕರಿಗೆ ಸ್ವಲ್ಪ ಮಟ್ಟಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡಿದ್ದಾರೆ. ಇದು ಬಹಳ ಉತ್ತಮವಾದಂಥ ಕೆಲಸ ಎಂಬುದಾಗಿ ಹೇಳುತ್ತೇನೆ. ಇನ್ನು ಜನರತ್ನ ಆದಳಿತ, ಬೇಲೂರು ಘೋಷಣೆ ಇವುಗಳಿಂದ ನಮ್ಮ ಅಧಿಕಾರ ವಿಕೇಂದ್ರೀಕರಣದ ಮೂರು ಸ್ತರದ ವ್ಯವಸ್ಥೆಗಳು ಅಂದರೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆಗಳು ಇನ್ನಷ್ಟು ಬಲಗೊಳ್ಳಲು ಸಾಧ್ಯವಾಗುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರಕ್ಕೆ ಬಂದ ನಂತರ ಈ ಪಂಚಾಯಿತಿಗಳಿಗೆ ಕೊಡತಕ್ಕಂಥ ಅನುದಾನವನ್ನು ಐದು ಲಕ್ಷ ರೂಪಾಯಿಗಳಿಗೆ ವಿರಿಸಿದ್ದಾರೆ. ಇದೂ ಕೂಡ ಬಹಳ ಅಭಿನಂದನೀಯವಾದಂಥಾದ್ದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಬೇಲೂರು ಘೋಷಣೆಯಿಂದ ಈ ವ್ಯವಸ್ಥೆಗಳಿಗೆ ಇನ್ನಷ್ಟು ಹೆಚ್ಚಿನ ಬಲ ಬರಲಿ ಎನ್ನುವ ಶುಭ ಹಾರೈಕೆಯ ಜೊತೆಗೆ ನಮ್ಮ ಸರ್ಕಾರ ಕಳೆದ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ಬಹಳಷ್ಟು ರಸ್ತೆಗಳಿಗೆ ಹೊಸ ಕಾಯಕಲ್ಪ ಕೊಟ್ಟಿದೆ ಎನ್ನುವ ಮಾತನ್ನು ಹೇಳುತ್ತೇನೆ. ಅದು ರಾಜ್ಯ ಹೆದ್ದಾರಿಗಳಿರಬಹುದು ಅಥವಾ ಜಿಲ್ಲಾ ಕೇಂದ್ರ ರಸ್ತೆಗಳಿರಬಹುದು, ಇವುಗಳೆಲ್ಲವೂ ಕೂಡ ಅನೇಕ ವರ್ಷಗಳ ಹಿಂದೆ ಡಾಂಬರೀಕರಣ ಆದಂಥಾದ್ದು, ಅವುಗಳಿಗೆ ಈಗ ಮರುಡಾಂಬರೀಕರಣ ಕಳೆದ 3–4 ವರ್ಷಗಳ ಅವಧಿಯಲ್ಲಿ ಆಗಿದೆ. 3,500 ಕಿ.ಮೀ.ಗಳಷ್ಟು ರಾಜ್ಯದ ಹೆದ್ದಾರಿಗಳು ಮರು ಡಾಂಬರೀಕರಣ ಆಗಿದ್ದು, ಇದು ಒಂದು ಇತಿಹಾಸ ಎನ್ನುವ ಮಾತನ್ನು ಹೇಳುತ್ತೇನೆ. ಡೀಸೆಲ್ ಮತ್ತು ಪೆಟ್ರೋಲ್ ಬೆಲೆಗಳು ದಿವಸದಿಂದ ದಿವಸಕ್ಕೆ, ಸಾಮಾನ್ಯ ಜನರಿಗೆ ಎಟುಕದೇ ಇರುವಂಥ ಹಂತಕ್ಕೆ ಬಂದು, ಮೇಲೆ ಮೇಲೆ ಹೋಗುತ್ತಿವೆ. ಇವುಗಳಿಗೆ ಕಳೆದ ಬಿದಾರು ವರ್ಷಗಳ ಹಿಂದೆ ಇದ್ದಂಥ ಬೆಲೆ ಇವತ್ತು ಅರ ದುಪ್ಪಟ್ಟು ಆಗುವಂಥ ಹಂತಕ್ಕೆ ಬಂದಿದೆ. ಅಷ್ಟರ ಮಟ್ಟಿಗೆ ಬೆಲೆ ಇರುವಾಗ ಸ್ವಲ್ಪ ಮಟ್ಟಿಗಾದರೂ ಡೀಸೆಲ್ ಮತ್ತು ಪೆಟ್ರೋಲ್ ಮೇಲೆ ಇದತಕ್ಕಂಥ ಕರದಿಂದ ವಿನಾಯಿತಿ ಮಾಡಿ 400 ಕೋಟಿ ರೂಪಾಯಿಗಳ ಪರಿಹಾರವನ್ನು ಈ ವರ್ಗಕ್ಕೆ

ಒದಗಿಸಿರುವಂಥಾದ್ದು ಬಹಳ ದೊಡ್ಡ ಕೊಡುಗೆ ಎಂಬುದಾಗಿ ಹೇಳುತ್ತೇನೆ. ಇನ್ನು ನಮ್ಮ ಕರಾವಳಿ ಜಿಲ್ಲೆಗಳು ಕಡಲು ಕೊರೆತದಂಥ ಒಂದು ಪ್ರಾಕೃತಿಕ ವಿಕೋಪಕ್ಕೆ ಆಗಾಗ್ಗೆ ಬಲಿಯಾಗತಕ್ಕಂಥದ್ದು ನಡೆಯುತ್ತಿದೆ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ರಾತ್ರಿ ಮನೆಯಲ್ಲಿ ಮಲಗಿದವರು ಬೆಳಿಗ್ಗೆ ಎದ್ದು ನೋಡುವಾಗ ಮನೆಯನ್ನೇ ಕಳೆದುಕೊಳ್ಳುವಂಥ, ತೋಟವನ್ನು ಕಳೆದುಕೊಳ್ಳತಕ್ಕಂಥ ಬಹಳ ಗಂಭೀರವಾದಂಥ ಸಮಸ್ಯೆಯನ್ನು ಎದುರಿಸತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಹೊಸ ರೀತಿಯ ತಂತ್ರಜ್ಞಾನವನ್ನು ಅಳವಡಿಸುವುದರ ಜೊತೆಗೆ 10 ಕೋಟಿ ರೂಪಾಯಿಗಳನ್ನಾದರೂ ಕೂಡ ಈ ವರ್ಷ ಇದನ್ನು ಎದುರಿಸಲಿಕ್ಕೆ ಇಟ್ಟಿದ್ದು ಬಹಳ ಉತ್ತಮವಾದಂಥ ಕಾರ್ಯಕ್ರಮ ಎಂಬುದಾಗಿ ಪ್ರಸ್ತಾಪ ಮಾಡುತ್ತಾ ಇವತ್ತು ರಸ್ತೆಗಳು, ಸೇತುವೆಗಳು, ಕಟ್ಟಡಗಳಿಗೆ ಮಾತ್ರ ಆದ್ಯತೆಯನ್ನು ಕೊಟ್ಟಿದ್ದಲ್ಲ, ಅವಕಾಶದಿಂದ ವಂಚಿತರಾದಂಥ ದುರ್ಬಲವರ್ಗದವರಿಗೆ ಅವಕಾಶಗಳನ್ನು ಕೊಡುವಂಥ, ಸಾಮಾನ್ಯ ಜನರಿಗೂ ಅವರ ಬದುಕಿನಲ್ಲಿ ಆಸರೆಯನ್ನು ಕೊಡತಕ್ಕಂಥ ವ್ಯವಸ್ಥೆ, ನಿವೇಶನಗಳನ್ನು ಕೊಡತಕ್ಕಂಥದ್ದನ್ನು ಬಹಳ ವ್ಯವಸ್ಥಿತವಾಗಿ ನಮ್ಮ ಮಾನ್ಯ ಎಸ್.ಎಂ. ಕೃಷ್ಣರವರು ಮಾಡಿದ್ದಾರೆ ಜೊತೆಗೆ ಅಕ್ರಮ ಜಮೀನನ್ನು ಸಕ್ರಮ ಮಾಡುವ ವ್ಯವಸ್ಥೆ ಇರಬಹುದು, ಮನೆಗಳ ವಿತರಣೆಯಲ್ಲಂತೂ ನಮ್ಮ ಕರ್ನಾಟಕದಲ್ಲಿ ಒಂದು ಕ್ರಾಂತಿಯನ್ನೇ ನಾವು ಕಾಣಲಿಕ್ಕೆ ಸಾಧ್ಯವಿದೆ. ಗ್ರಾಮೀಣ ಆಸ್ಪತ್ರೆಗಳಲ್ಲಿ ಸಾಕಷ್ಟು ವೈದ್ಯರುಗಳನ್ನು ತುಂಬುವಂಥ, ಶಾಲೆಗಳಿಗೆ ಅಧ್ಯಾಪಕರುಗಳನ್ನು ಆಗಾಗ್ಗೆ ತುಂಬುವಂಥ ಈ ವ್ಯವಸ್ಥೆ ತುಂಬಾ ಉತ್ತಮವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿ, ಇಷ್ಟು ಅಭಿವೃದ್ಧಿ ಕೆಲಸಕಾರ್ಯಗಳನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು 5 ವರ್ಷಗಳ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿ ಅನುಷ್ಠಾನ ಮಾಡಿಕೊಂಡು ಬಂದರೂ ಕೂಡ ಇವತ್ತು ಅಲ್ಲಲ್ಲಿ ಸರ್ಕಾರ ಏನೂ ಮಾಡಲಿಲ್ಲ, ಅದು ಮಾಡಲಿಲ್ಲ ಇದು ಮಾಡಲಿಲ್ಲ ಎನ್ನತಕ್ಕಂಥ ಟೀಕೆಗಳು ಬರುವುದು ಸ್ವಾಭಾವಿಕ. ಆದರೆ ಇದಕ್ಕಿಂತ ಒಳ್ಳೆಯ ಆಯವ್ಯಯ ಪತ್ರವನ್ನು ನಾವು ನಿರೀಕ್ಷೆ ಮಾಡಲಿಕ್ಕೆ ಸಾಧ್ಯವಿಲ್ಲ. ಅಂಥ ಒಳ್ಳೆಯ ಆಯವ್ಯಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅದನ್ನೂ ಸಹ ಅಭಿನಂದಿಸುವಲ್ಲಿ ಕೆಲವೊಮ್ಮೆ ಹಿಂದುಮುಂದು ನೋಡುತ್ತಾರೆ. ಮೊನ್ನೆ ನನ್ನ ಸ್ನೇಹಿತರಾದ ಒಬ್ಬರು ಹಾಸ್ಯ ಕವಿಗಳು ನನಗೆ ಸಣ್ಣ ಹಾಸ್ಯ ಪುಸ್ತಕಗಳನ್ನು ಕೊಟ್ಟರು. ಅದರಲ್ಲಿ ಒಂದನ್ನು ನಾನು ಬರುವಾಗ ಓದಿಕೊಂಡು ಬಂದೆ. ಅದರಲ್ಲಿ ಒಂದು ಹೀಗಿತ್ತು.

ಚೇರ್ಮನ್ (ಶ್ರೀ ಬಿ.ಬಿ. ಶಿವಪ್ಪ) ಅವರು ಪೀಠವನ್ನು ಅಲಂಕರಿಸಿದರು

ಶ್ರೀ ಬಿ. ಸೋಮಶೇಖರ್: ಮಾನ್ಯ ಛೇರ್ಮನ್‌ರವರೇ, ರೆಕಾರ್ಡ್‌ಗೆ ತಪ್ಪುಗಳು ಹೋಗಬಾರದು ಅವರು ಹೇಳಿದ್ದು ಏನೆಂದರೆ ಸರ್ಕಾರಿ ಜಮೀನುಗಳಲ್ಲಿ, ಸರ್ವೆ ನಂಬರುಗಳಲ್ಲಿ ಲಕ್ಷಾಂತರ ಮನೆಗಳನ್ನು ಕಟ್ಟಿ ಅದಕ್ಕೆ ಟ್ಯಾಕ್ಸ್ ಇಲ್ಲದೆ ಅದನ್ನು ಹಕ್ಕು ಇಲ್ಲದೆ ಮನೆಗಳು ಇರುತ್ತಾ ಇದ್ದವು. ಅದನ್ನು ಸೆಕ್ಷನ್ 94 ಸಿ ಎಂದು ಸೆಕ್ಷನ್ 94 B ಏನೆಂದರೆ ಸಾಗುವಳಿ ಜಮೀನುಗಳನ್ನು ಅಕ್ರಮ-ಸಕ್ರಮ ಮಾಡುವುದಕ್ಕೆ 1991 ರಿಂದ 1999ರ ವರೆಗೆ ಅನುಮತಿ ಕೊಟ್ಟಂಥ ಸರ್ಕಾರ ನಮ್ಮದು. ನಂತರ ವಿಶೇಷವಾಗಿ ಯೋಚನೆ ಮಾಡಿ ಅದೇ ಮನೆಗಳನ್ನು ಸಕ್ರಮ ಮಾಡತಕ್ಕಂಥದ್ದು ಬಹಳ ಸಮಸ್ಯೆಯಾಗಿದೆ ಅದಕ್ಕೂ ಮಾಡಬೇಕೆಂದು ಹೇಳಿ ಸೆಕ್ಷನ್ 94 C ಎಂದು 1999ರಲ್ಲಿ ಅದನ್ನು ಜಾರಿಗೆ ತಂದದ್ದು ನಮ್ಮ ಸರ್ಕಾರ. ಆ ಸರ್ಕಾರದಿಂದ ಇವತ್ತು ಮುಖ್ಯಮಂತ್ರಿ ಅವರಿಗೆ ಸಕ್ರಮ-ಸಕ್ರಮ ಮಾಡಬೇಕೆನ್ನತಕ್ಕಂಥದ್ದನ್ನು ನಿಮ್ಮ ಸರ್ಕಾರ ಬಂದಮೇಲೆ ಹೊರಡಿಸಿದ್ದೀರಿ, ಹೆಚ್ಚು ಹಣವನ್ನು ಆ ವಲಯಕ್ಕೆ ಹಾಕಿದಿರಿ. ಏಕೆಂದರೆ ರೆಕಾರ್ಡ್‌ಗೆ ತಪ್ಪು ಹೋಗಬಾರದು. ಒಂದು ಸಾರಿ ಶ್ರೀ ಸಾಲಿಯಾನರವರು ಹೇಳಿದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದರ ಬಗ್ಗೆ ಇಲ್ಲಿ ಚರ್ಚೆಯಾಯಿತು.

ಶ್ರೀ ಬಿ. ಸೋಮಶೇಖರಪ್ಪ: ಅವರ ಇಬ್ಬರು ಮಂತ್ರಿಗಳು ಏನು ಹೇಳಿದರೆಂದರೆ– ಸೋಮಶೇಖರ್‌ರವರೇ, ನೀವು ಮಾಡಿದಂಥ ಒಂದು ಸುಧಾರಣೆಯಿಂದ ನಮಗೆ 10 ಸಾವಿರ ಹೆಚ್ಚಿಗೆ ಬಂದ ಹಾಗೆ ಆಯಿತು ಎಂದು ಮಾನ್ಯ ರೇವಣ್ಣನವರು ಹೇಳಿದರು 5000 ಓಟು ಜಾಸ್ತಿ ಬಂತು ಎಂದು ಶ್ರೀ ಸಾಲಿಯಾನವರು ಹೇಳಿದರು. ಇದರು ನಮ್ಮ ಸರ್ಕಾರದ ಕೊಡುಗೆ. ಇದು ಬಹಳ ವರ್ಷಗಳ ಹಿಂದೆ ಆಗಿದೆ. ಇದು ನಮ್ಮ ಸರ್ಕಾರದ ಕೊಡುಗೆ ಎಂದು ನೀವು ಹೇಳುತ್ತಿದ್ದೀರಿ? ಏಕೆ ಹೇಳುತ್ತಿದ್ದೇನೆ ಎಂದರೆ ರೆಕಾರ್ಡ್‌ಗೆ ತಪ್ಪು ಹೋಗಬಾರದು. ಅದು ಯಾವಾಗ ಸೆಕ್ಷನ್ 94ಸಿ ತಿದ್ದುಪಡಿ ತಂದದ್ದು, ಅಕ್ರಮ–ಸಕ್ರಮ ಮನೆಗಳನ್ನು ಮಾಡತಕ್ಕಂಥ ಕಾನೂನೋ ಇದನ್ನು ನೀವು credit ತೆಗೆದುಕೊಳ್ಳುತ್ತಿದ್ದೀರಿ. ಭಾಷಾ ಕಾಗದ ರದ್ದು ಮಾಡಿದ್ದೇವೆಂದು ಹೇಳಿದರಲ್ಲಾ, ಆ Computer RTC ಕೊಟ್ಟದ್ದು ನೀವು ಎಂದು ಹೇಳಿಕೊಂಡ್ರಲ್ಲಾ. ಈ ತರಹ ಏಕೆ ಹೇಳುತ್ತಿದ್ದೀರಿ? ಈ ತರಹ ಆಗಬಾರದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಮಾನ್ಯ ಛೇರ್ಮನ್‌ರವರೇ, ಈ ಸರ್ಕಾರ ಬಂದಮೇಲೆ ಮೂರು ಮುಕ್ಕಾಲು ಸೆಂಟ್ಸ್ ಜಾಗ ಏನಾದರೂ ಮಂಜೂರಾತಿ ಮಾಡಬೇಕಾದರೆ ಒಂದು ಅಡಿಗೆ 1 ರೂಪಾಯಿ 40 ಪೈಸೆ ಹಾಕಿದ್ದಾರೆ. ಸಾವಿರಾರು ಕಡತಗಳು ಈ ರಾಜ್ಯದಲ್ಲಿ ಬಾಕಿ ಇದೆ. ಬಡವ, ಕೂಲಿಕಾರ್ಮಿಕ ಮೂರು ಸೆಂಟ್ ಜಾಗದಲ್ಲಿ ಕಟ್ಟಿಕೊಳ್ಳುತ್ತಾನೆ. ದೊಡ್ಡ ಮನುಷ್ಯ ಆದರೆ ದೊಡ್ಡ ಸೈಟ್‌ನಲ್ಲಿ ಮನೆ ಕಟ್ಟುತ್ತಾನೆ. ಭಾಗ 1ರಲ್ಲಿ ಅಂಥವರಿಗೆ ಪಟ್ಟಿ ಕೊಡಲಿಕ್ಕೆ ಆಗುತ್ತಿರಲಿಲ್ಲ. ತಮಗೆಲ್ಲರಿಗೂ ಗೊತ್ತಿರಬಹುದು. ನಮ್ಮ ಛೇರ್ಮನ್‌ರಿಗೂ ಗೊತ್ತಿರಬಹುದು. 1 ರೂಪಾಯಿ 40 ಪೈಸೆ ಒಂದು ಅಡಿಗೆ ಕಟ್ಟಲಿಕ್ಕೆ ಆ ಜಾಗ ಯಾರಿಗೂ ಸಾಕಾಗುತ್ತಿರಲಿಲ್ಲ. 1850 ರೂಪಾಯಿ ಬೀಳುತ್ತದೆ. ಸರ್ಕಾರ ಅದನ್ನು ವಾಪಸ್ಸು ಪಡೆದುಕೊಳ್ಳಬೇಕು.

ಛೇರ್‌ಮನ್: ಮಾತನಾಡುವುದಕ್ಕೆ ನಿಮ್ಮ ಸರದಿ ಬಂದಾಗ ನೀವು ಮಾತನಾಡಿ ಈಗ ಅವರು ಮಾತನಾಡಲಿ.

ಶ್ರೀ ಹೆಚ್. ನೋಪಾಲ ಭಂಡಾರಿ: ಮಾನ್ಯ ಛೇರ್ಮನ್‌ರವರೇ, ನಿವೇಶನಗಳಲ್ಲಿ ಕೊಡುವ ಬಗ್ಗೆ 94ಸಿ ಯಾರ ಕಾಲದಲ್ಲಿ ಆಗಿದೆ ಯಾರ ಕಾಲದಲ್ಲಿ ಹೆಚ್ಚಾಗಿದೆ, ಯಾರ ಕಾಲದಲ್ಲಿ ಕಡಿಮೆಯಾಗಿದೆ ಎನ್ನುವ ಪ್ರಸ್ತಾಪವನ್ನು ನಾನು ಮಾಡಲಿಲ್ಲ. ಆದರೆ ನಿವೇಶನ ಕೊಡಲಿಲ್ಲ, ಕಳೆದ 4–5 ವರ್ಷಗಳ ಹಿಂದೆ ಉಚಿತ ನಿವೇಶನಗಳನ್ನು ಕೊಡತಕ್ಕಂಥ ವ್ಯವಸ್ಥೆ ಒಂದು ರೀತಿಯಲ್ಲಿ ಗೊಂದಲಮಯವಾಗಿತ್ತು. ತಾಲ್ಲೂಕು ಪಂಚಾಯತ್‌ನವರು ನಿವೇಶನಗಳನ್ನು ಕೊಡಬೇಕೆನ್ನತಕ್ಕಂಥ ವ್ಯವಸ್ಥೆ ಇತ್ತು. ಆದರೆ ತಾಲ್ಲೂಕು ಪಂಚಾಯತ್‌ನಲ್ಲಿ ನಿವೇಶನ ಕೊಡಲಿಕ್ಕೆ ಕಂದಾಯ ಇಲಾಖೆ ಮತ್ತು ತಾಲ್ಲೂಕು ಪಂಚಾಯತ್ ಮಧ್ಯ ಒಂದು ರೀತಿಯ co-ordination ನ ಕೊರತೆ ಇತ್ತು. ನಮ್ಮಲ್ಲಿ ನಿವೇಶನ ಮಂಜೂರು ಆಗುವಲ್ಲಿ ಸ್ವಲ್ಪ ಕುಂಟಿತವಾಗಿತ್ತು. ಈಗ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಆ ನಿವೇಶವನ್ನು ಕೊಡುವಂಥ ವ್ಯವಸ್ಥೆ ನಮ್ಮಲ್ಲಿಂತೂ ಬಹಳ ವಿಶೇಷವಾಗಿ ಆಗಿದೆ. ಅದನ್ನು ದಾಖಲೆ ಸಹಿತ ತಮಗೆ ತೋರಿಸಲಿಕ್ಕೆ ನಾನು ತಯಾರಿದ್ದೇನೆ. ಅದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಾ, ಒಳ್ಳೆಯ ಕೆಲಸಗಳನ್ನು ಕೆಲವೊಮ್ಮೆ ಹೇಳಲಿಕ್ಕೆ ಕೂಡ ಹಿಂದೆ ಮುಂದೆ ನೋಡುವಂಥದ್ದು ಆಗುತ್ತಿದೆ. ಮನಸ್ಸಿನ ಒಳಗೆ ಕೆಲವೊಮ್ಮೆ ಒಳ್ಳೆಯದು ಎಂದು ಇರುತ್ತದೆ. ನನ್ನ ಸ್ನೇಹಿತರಾದಂಥ ಒಬ್ಬರು ಸಾಹಿತಿಗಳು ಕೊಟ್ಟಂಥ ಪುಸ್ತಕದಲ್ಲಿನ ಒಂದು ಕಥೆಯನ್ನು ಹೇಳಬೇಕೆಂದಿದ್ದೇನೆ. ನಮ್ಮಲ್ಲಿ ನಾಟಕ ನಡೆಯುವಾಗ ಇಬ್ಬರು ಸ್ನೇಹಿತರು ಒಂದು ನಾಟಕ ನೋಡಲಿಕ್ಕೆ ಹೋಗಿದ್ದರಂತೆ. ಆ ಕರ್ನಾಟಕದಲ್ಲಿ

ಒಬ್ಬ ಹಾಸ್ಯ ಕಲಾವಿದ ಬಂದು ವೇದಿಕೆಯಲ್ಲಿ ಒಂದು ಹಾಸ್ಯ ಮಾಡಿದಾಗ ಸಭೆಯಲ್ಲಿ ಇದ್ದವರೆಲ್ಲಾ ಎದ್ದುಬಿದ್ದು ನಗುವಷ್ಟು ಹಾಸ್ಯ ಅಷ್ಟು ಚೆನ್ನಾಗಿತ್ತಂತೆ. ಆದರೆ ಪಕ್ಕದಲ್ಲಿ ಕುಳಿತುಕೊಂಡವನೊಬ್ಬ ಒಂದಿಷ್ಟೂ ಕೂಡ ನಗಲಿಲ್ಲವಂತೆ. ಬಹಳ ಗಂಭೀರವಾಗಿ ಕುಳಿತುಕೊಂಡಿದನಂತೆ. ಆಗ ಇನ್ನೊಬ್ಬ– ಏನಪ್ಪಾ, ನನಗೆ ನಗು ತಡೆಕೊಳ್ಳಲಿಕ್ಕೆ ಆಗಲಿಲ್ಲ, ನೀನು ಒಂದಿಷ್ಟು ಕೂಡ ನಗುತ್ತಿಲ್ಲವಲ್ಲಾ ಏನು ಪರಿಸ್ಥಿತಿ ಎಂದು ಕೇಳಿದಾಗ, 'ನಾನು ನಗಬೇಕಂತಿದ್ದೆ, ಚೆನ್ನಾಗಿ ಆಗಿದೆ, ಆದರೆ ಮನೆಗೆ ಹೋಗಿ ನಗಬೇಕೆಂದು ಮಾಡಿದ್ದೇನೆ, ಏಕೆಂದರೆ ಅವನಿಗೂ ನನಗೂ ಸ್ವಲ್ಪ ಸರಿಯಿಲ್ಲ' ಎಂದು ಅವನು ಹೇಳಿದನಂತೆ. ಹಾಗೆಯೇ ಒಳ್ಳೆಯ ಕೆಲಸಗಳನ್ನು ಒಳ್ಳೆಯದೆಂದು ಹೇಳಿದರೆ ಬಹುಶಃ ಕಷ್ಟ ಆಗುತ್ತದೆ ಎನ್ನುವ ದೃಷ್ಟಿಯಿಂದ ಕೆಲವೊಮ್ಮೆ ಟೀಕೆ ಮಾಡುವುದು ಸ್ವಾಭಾವಿಕ. ಏನಿದ್ದರೂ ಒಳ್ಳೆಯದನ್ನು ಒಳ್ಳೆಯದು ಎಂದು ಹೇಳತಕ್ಕಂಥ ನಿಟ್ಟಿನಲ್ಲಿ ನಮ್ಮ ಆಯವ್ಯಯ ಅತ್ಯಂತ ಉತ್ತಮ ಆಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ,

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಈಗ ಒಳ್ಳೆಯದನ್ನು ಒಳ್ಳೆಯದೆಂದು ಹೇಳಬೇಕು.

ಛೇರ್ಮನ್: ಅವರಿಗೆ ಮಾತನಾಡುವುದಕ್ಕೆ ಬಿಟ್ಟುಬಿಡಿ. ನೀವು ಮಾತನಾಡುತ್ತೀರಲ್ಲಾ, ಹೇಗೂ ಗುರುತು ಹಾಕಿಕೊಳ್ಳುತ್ತಿದ್ದೀರಿ, ನೀವು ಮಾತನಾಡುವಾಗ ಆಗ ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಸ್ವಾಮಿ, ಅವರು ನಮಗೆ ನಿಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳಿಬಿಟ್ಟಿದ್ದರೆ ನಾವು ಅವರಿಗೆ ವಿರೋಧ ಮಾಡುತ್ತಿರಲಿಲ್ಲ, ಅವರು ಒಂದು ಮಾತನ್ನೂ ಸಹ ಹಿಂದಿನ ಸರ್ಕಾರ ಒಳ್ಳೆಯ ಕಾರ್ಯಕ್ರಮವನ್ನು ಮಾಡಿದೆ, ಅದನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದ್ದರೆ ನಮಗೂ ಸಮಾಧಾನ ಆಗುತ್ತಿತ್ತು ಅವರಿಗೂ ಸಮಾಧಾನ ಆಗುತ್ತಿತ್ತು. ಆಗ ಅವರು ಮನೆಯಲ್ಲಿ ಹೋಗಿ ನಗುವ ಪ್ರಸಂಗ ಬರುತ್ತಿರಲಿಲ್ಲ ಹಾಗೆಯೇ ನಾವೂ ಹೋಗಿ ಮನೆಯಲ್ಲಿ ನಗುವ ಪ್ರಸಂಗ ಬರುತ್ತಿರಲಿಲ್ಲ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮಾನ್ಯ ಛೇರ್ಮನ್‌ರವರೇ, ಮಾನ್ಯ ಮುಖ್ಯಮಂತ್ರಿಗಳು ಕಳೆದ 4 ವರ್ಷಗಳಲ್ಲಿ ಅಲ್ಲದೆ ಈ ಬಾರಿಯೂ ಕೂಡ ಅತ್ಯಂತ ಉತ್ತಮವಾದಂಥ ಒಂದು ಆಯವ್ಯಯವನ್ನು ಮಂಡಿಸಿ ಜನಪರವಾದಂಥ ಅತ್ಯಂತ ಉತ್ತಮವಾದಂಥ ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಉತ್ತಮವಾಗಿ ಮೂಡಿ ಬರತಕ್ಕಂಥ ನಿಟ್ಟಿನಲ್ಲಿ ಒಂದು ಒಳ್ಳೆಯ ಆಯವ್ಯಯವನ್ನು ಮಂಡಿಸಿದ್ದಾರೆ. ಇಂಥ ಒಳ್ಳೆಯ ಆಯವ್ಯಯವನ್ನು ಮಂಡನೆ ಮಾಡಿದ್ದನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ಮುಂದಿನ ದಿನಗಳಲ್ಲಿ ಈ ಆಯವ್ಯಯ ಪತ್ರದಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಪ್ರಯೋಜನ ಆಗಲಿ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಮತ್ತೊಮ್ಮೆ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಸಚಿವರು : ಅಧಿಕಾರಿಗಳ ಗೈರು ಹಾಜರಿ ಬಗ್ಗೆ

†**ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):** ಮಾನ್ಯ ಛೇರ್ಮನ್‌ರವರೇ, ಸದನದಲ್ಲಿ ಬಜೆಟ್ ಮೇಲೆ ಚರ್ಚೆಯಾಗುತ್ತಿದೆ. ಅಧಿಕಾರಿಗಳು ಯಾರೂ ಇಲ್ಲ. ಅರಣ್ಯ ಇಲಾಖೆಯ ಮಂತ್ರಿಗಳನ್ನು ಬಿಟ್ಟರೆ ಬೇರೆ ಮಂತ್ರಿಗಳಂತೂ ಇಲ್ಲ.

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)